**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ 15.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ . ಸಿ.ಎನ್.ಹೆಚ್. ವಕೀಲರಿಂದಃ**

5. 1 ಮತ್ತು 2 ನೇ ಪ್ರತಿವಾದಿಗಳ ತಾತನ ಹೆಸರು ಕೆಂಪೇಗೌಡ. ಸದರಿ ಕೆಂಪೇಗೌಡರವರಿಗೆ 4 ಜನ ಮಕ್ಕಳು ಅವರುಗಳೆಂದರೆ ರಂಗೇಗೌಡ , ಚೌಡೇಗೌಡ , ಮಾದೇಗೌಡ ಮತ್ತು ಕಾವೇಟಪ್ಪ. ನಿ.ಪಿ.1 ರಲ್ಲಿಯೂ ಸಹ ಇದೆಲ್ಲವೂ ನಮೂದಾಗಿರುತ್ತದೆ ಎಂದರೆ ಸರಿ . ಕಾವೇಟಪ್ಪರವರಿಗೆ 4 ಜನ ಗಂಡುಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ . ಕೆಂಪೇಗೌಡರವರ ಕುಟುಂಬಕ್ಕೆ ಸೇರಿದ ಒಟ್ಟು ಎಷ್ಟು ಆಸ್ತಿಗಳಿದ್ದವು ಮತ್ತು ಅವುಗಳ ಸ.ನಂಃ, ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ತಿಳಿದಿಲ್ಲ.

6. 1 ನೇ ಪ್ರತಿವಾದಿಯ ತಂದೆ ರಂಗೇಗೌಡ ಮತ್ತು ಅವರ ಅಣ್ಣತಮ್ಮಂದಿರು ಅವರ ಕುಟುಂಬದ ಆಸ್ತಿಗಳನ್ನು ಸುಮಾರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಸದರಿ ವಿಭಾಗದಂತೆ ಯಾರಿಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ರಂಗೇಗೌಡರವರಿಗೆ ಆ ವಿಭಾಗದ ಮುಖಾಂತರ ದಾವಾಸ್ವತ್ತು ಮತ್ತು ಇತರೆ ಆಸ್ತಿಗಳು ಅವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ದಾವಾಸ್ವತ್ತಿನ ಖಾತೆ ಮತ್ತು ಪಹಣಿ ರಂಗೇಗೌಡರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿನ ಖಾತೆ ಮತ್ತು ಪಹಣಿ ರಂಗೇಗೌಡರವರ ಹೆಸರಿನಲ್ಲಿರುವುದು ಸುಮಾರು 30 ವರ್ಷಗಳ ಹಿಂದೆ ನನಗೆ ತಿಳಿದಿರುತ್ತದೆ. ಸದರಿ ಎಂ.ಆರ್ ಅನ್ನು ನನ್ನ ತಂದೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

7. 1 ಮತ್ತು 2 ನೇ ಪ್ರತಿವಾದಿಗಳು ಅವರ ತಂದೆಗೆ ಬಂದ ಜಮೀನುಗಳನ್ನು 1982 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಅದರಂತೆ ಖಾತೆ ಮತ್ತು ಪಹಣಿ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ . ಅದರಂತೆ ದಾವಾಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ . ಅದರಂತೆ ದಾವಾಸ್ವತ್ತಿನಲ್ಲಿ ಸದರಿ ಪಾರಿಕತ್ ನ ದಿನಾಂಕದಿಂದ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರಿದು ನಮಗೂ ಅದರಲ್ಲಿ ಭಾಗಾಂಶದ ಹಕ್ಕು ಇರುತ್ತದೆ ಎನ್ನುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಎಂ.ಆರ್ ನ ವಿರುದ್ಧ ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವಾಸ್ವತ್ತಿನ ಮೇಲೆ ನಮ್ಮ ತಂದೆಗಾಗಲೀ ನಮಗಾಗಲೀ ಯಾವುದೇ ಭಾಗಾಂಶದ ಹಕ್ಕು ಇಲ್ಲದೇ ಇರುವುದರಿಂದ ಕುಟುಂಬದಲ್ಲಿರುವ ವ್ಯಕ್ತಿಗಳ ಒಂದೇ ಹೆಸರಿರುವುದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

8. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಅಣ್ಣ . ವಾದಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ವಯಸ್ಸು ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆಗೆ ತಿಳುವಳಿಕೆ ಇಲ್ಲದ ಕಾರಣ ಅವರು ತಪ್ಪಾಗಿ ಮಾಹಿತಿ ನೀಡಿರುತ್ತಾರೆ ಎನ್ನುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸಲು ನಾನು ಮತ್ತು ಇತರೆ ವಾದಿಗಳು ಮಾಹಿತಿಯನ್ನು ನೀಡಿರುತ್ತೇವೆ. ನಿ.ಪಿ.1 ವಂಶವೃಕ್ಷವನ್ನು ಈ ಪ್ರಕರಣಕ್ಕಾಗಿ ಸೃ ಷ್ಟಿಸಿದ್ದು ಅದರಿಂದ ಕುಟುಂಬದ ಬಹಳಷ್ಟು ಸದಸ್ಯರನ್ನು ಕೈ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ನಮೂದಾಗಿರುವ ರಂಗಪ್ಪ ಎನ್ನುವವರಿಗೆ ಎಷ್ಟು ಆಸ್ತಿಗಳು ಇದ್ದವು ಮತ್ತು ಸ.ನಂ: ಗಳು ಇದ್ದವು ಎಂದು ನನಗೆ ತಿಳಿದಿಲ್ಲ. ರಂಗಪ್ಪ ಮತ್ತು ಅವರ ಮಕ್ಕಳು ಯಾವಾಗ ಮತ್ತು ಯಾವ ಆಸ್ತಿಗಳನ್ನು ಒಳಗೊಂಡಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ .

9. ನನ್ನ ತಾತ ರಂಗಣ್ಣರವರಿಗೆ ಒಬ್ಬನೇ ಮಗ ಅವರ ಹೆಸರು ರಂಗಪ್ಪ. ಸದರಿ ರಂಗಯ್ಯರವರಿಗೆ 3 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣುಮಕ್ಕಳು . ಸದರಿ 4 ಜನ ಹೆಣ್ಣುಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ 3 ಜನ ಗಂಡುಮಕ್ಕಳು ಕೃಷ್ಣಯ್ಯ, 1ನೇ ವಾದಿ ಮತ್ತು ಕೆಂಪಯ್ಯ. ಸದರಿ ಕೆಂಪಯ್ಯರವರು ಅವಿವಾಹಿತರಾಗಿದ್ದು ಈಗ ಮೃತಪಟ್ಟಿರುತ್ತಾರೆ. ಕೃಷ್ಣಯ್ಯರವರಿಗೆ 3 ಜನ ಮಕ್ಕಳು. ನಿ.ಪಿ.1 ರಲ್ಲಿ ಈ ವಿಚಾರವನ್ನು ನಮೂದಿಸಿರುತ್ತೇನೆ.

10. 1ನೇ ಪ್ರತಿವಾದಿ ತಮ್ಮ ಕುಟುಂಬದ ಅವಶ್ಯಕತೆಗಾಗಿ ದಾವಾಸ್ವತ್ತು ಪೈಕಿ 2 ಎಕರೆಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಸದರಿ ಮಾರಾಟದ ನಂತರ ದಾವಾಸ್ವತ್ತಿನ ಪೈಕಿ 2 ಎಕರೆ ಜಮೀನಿನಲ್ಲಿ 10ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ಉಳಿದ ವಿಸ್ತೀರ್ಣದಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ನಿ.ಪಿ.13 ರಲ್ಲಿ ನಮೂದಿಸಿರುವ ವ್ಯಕ್ತಿಗಳ ಎಲ್ಲಾ ವಾರಸುದಾರರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ . ಪ್ರಸ್ತುತ ದಾವೆಯನ್ನು 5 ಎಕರೆ 36 ಗುಂಟೆ ಜಮೀನಿಗೆ ಸಲ್ಲಿಸಿರುತ್ತೇವೆ. ಸ.ನಂ:178 ರಲ್ಲಿ ಎರಡುಪೋಡಿಯಾಗಿರುತ್ತದೆ, ಅವುಗಳ ಸಂಖ್ಯೆ ಮತ್ತು ವಿಸ್ತೀರ್ಣ ನನಗೆ ತಿಳಿದಿಲ್ಲ. ಸದರಿ ಪೋಡಿಗಳ ಚಕ್ಕುಬಂದಿ ನನಗೆ ತಿಳಿದಿಲ್ಲ. ನಮಗೂ ದಾವಾಸ್ವತ್ತಿಗೂ ಸಂಬಂದ ಇಲ್ಲದೇ ಇದ್ದರೂ ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವಾದಿಗಳು ಬೆಂಗಳೂರಿನಲ್ಲಿ ವಾಸ ಇರುವುದರಿಂದ ದಾವಾಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**